ಕೂತು ಕಂಪ್ಯೂಟರ್ ಪರದೆಯ ಮೇಲೆ ಮನೆಯ ಸುತ್ತ ಮುತ್ತಲೂ ಇರುವವರ ನಡೆ ನುಡಿಯನ್ನು ನೋಡಬಹುದಾದ ಈ ಗ್ರೂಪಿನ ಮೇಲೆ ತಪ್ಪದೆ ಒಂದು ಕಣ್ಣಿಟ್ಟಿರುತ್ತೇನೆ.

ಇಲ್ಲಿ ಬರುವ ಕೋರಿಕೆ, ವಿಜ್ಞಾಪನೆಗಳೆಷ್ಟು ಬಗೆಯೆಂದರೆ ನಿಮಗದರ ಸ್ಯಾಂಪಲ್ ನೋಡಿದ ಮೇಲಷ್ಟೇ ತಿಳಿಯಬಹುದು. 'ನನ್ನ ಮೂರು ವರ್ಷದ ಮಗನಿಗೆ ಫುಟ್‌ಬಾಲ್ ಕಲಿಸಲು ಎಲ್ಲಿ ಕಳಿಸಲಿ?' ಎಂದೊಬ್ಬ ತಾಯಿ ಕೇಳಿದರೆ, ಇನ್ನೊಬ್ಬಳು ತೊದಲು ನುಡಿಯುವ ತನ್ನ ಮಗುವಿಗೆ ಮ್ಯಾಂಡರಿನ್ ಹೇಳಿಕೊಡುವವರು ಎಲ್ಲಿ ಸಿಗುತ್ತಾರೆಂದು ಕೇಳುವ ಬ್ರಿಟಿಷ್ ಮಾತೆ. ಮನೆಯಲ್ಲಿ ಮಾಡಿದ ಅಡುಗೆ ಹೆಚ್ಚಾಗಿ ಉಳಿದಿದೆ, ಯಾರಿಗಾದರೂ ಬೇಕಾ ಎಂಬ ಮೆಸೆಜ್ ನೋಡಿ ಮುಗಿಬಿದ್ದು ಓಡುವ ಕೈಲಾಗದ(ಕೈಯಲ್ಲಿ ಅಡುಗೆ ಮಾಡಲಾರದ) ಮಹಿಳೆಯರ ದಂಡು ಕ್ಯೂ ನಿಂತಿರುತ್ತಾರೆ ವರ್ಚ್ಯುಯಲ್ ಜಗುಲಿಯಲ್ಲಿ. ಕೆಲವರು ತಮ್ಮ ಗಂಡಂದಿರನ್ನೂ ಛೂ ಬಿಡುತ್ತಾರೆ.

ಇವತ್ತು ರಾತ್ರಿ ಸಂಗೀತ ಸಂಜೆಯ ಟಿಕೆಟ್ ಇದೆ, ನನಗೆ ಹೋಗಲಾಗುತ್ತಿಲ್ಲ ನಿಮಗೇನಾದರೂ ಬೇಕಾದರೆ ಖುಷಿಯಿಂದ ಕೊಡುತ್ತೇನೆ ಎನ್ನುವ ಮೆಸೇಜ್‌ಗೆ ಗಿರಾಕಿಗಳಿಲ್ಲದೆ ಮುಖ ಒಣಗಿಸುತ್ತಾ ಕೂತಿರುತ್ತದೆ. ಫ್ಯಾನ್ಸಿ ಡ್ರೆಸ್‌ಗೆ ನಮ್ಮ ಮಗುವಿಗೆ ಇಂಥಾ ಡ್ರೆಸ್ ಬೇಕಾಗಿತ್ತು ಎಂದು ಫೋಟೊ ಸಮೇತ ಒಬ್ಬಾಕೆ ಎರವಲು ಡ್ರೆಸ್ ಕೇಳಿದರೆ ತಾಯಂದಿರ ಹೃದಯ ಕರಗಿ ನಾನು, ನಾನು ಎಂದು ಮುಂದಾಗಿ ಸಹಾಯಹಸ್ತ ಚಾಚುತ್ತಾರೆ. ಇನ್ನೊಬ್ಬ ಬಡಪಾಯಿ ಅರ್ಜೆಂಟಾಗಿ ಸ್ಕ್ರೂ ಡ್ರೈವರ್ ಬೇಕಾಗಿತ್ತು ಎಂದರೆ ಪ್ರತಿ ಮನೆಯಲ್ಲಿಯೂ ಸ್ಕ್ರೂ ಡ್ರೈವರ್ ಇದ್ದರೂ ಯಾರೂ ಕೀಬೋರ್ಡ್ ಮೇಲೆ ತುದಿಬೆರಳೂ ಸೋಕಿಸದೇ ಕೂತಿರುತ್ತಾರೆ. ಬದುಕಿನಂತೆಯೇ ಇಲ್ಲಿಯೂ ವೈರುದ್ಧ್ಯಗಳೇ ಕಾಣುವುದು ಬರೀ ಕಾಕತಾಳೀಯವೇ?

ತಮಾಷೆ ಧಾಟಿಯಲ್ಲಿ ಮಾತಾಡಬಲ್ಲ ಒಬ್ಬಳು 'ಯಾವುದೋ ಭಾರದ ವಸ್ತು ತರಲು ಕೈಗಾಡಿ(ಟ್ರಾಲಿ) ಇದ್ದರೆ ಕೊಡಿ' ಅಂತ ಬರೆದು ಇನ್ನೊಂದು ಲೈನೂ ಸೇರಿಸಿದ್ದಳು, 'ನೀವ್ಯಾರೋ ಅವತ್ತು ನನ್ನ ಟ್ರಾಲಿ ತಗೊಂಡು ಹೋಗಿದ್ರಲ್ಲ, ಅದನ್ನೇ ವಾಪಸ್ ಕೊಟ್ರೂ ದೊಡ್ಡ ಉಪಕಾರ ಆಗ್ತಿತ್ತು' ಅಂತ. ಇಂತಹ ನಾಜೂಕೆಲ್ಲ ಗೊತ್ತಿಲ್ಲದ ಹಲವರು ನೇರವಾಗಿ ತಮ್ಮ ಸಾಮಾನು ಹಿಂತಿರುಗಿಸದವರ ಮೇಲೆ ಅಸಮಧಾನ ವ್ಯಕ್ತಪಡಿಸುವುದೂ ಇದ್ದೇ ಇದೆ. ಸಿಡಿಲಿಗೆ ಮುರಿದ ಮರ, ಸತ್ತು ಬಿದ್ದ ಇಲಿ, ಹೆಗ್ಗಣಗಳ ಬಗ್ಗೆ ಎಚ್ಚರಿಕೆ, ಸೊಳ್ಳೆಗೆ ಹೊಗೆ ಹಾಕುವುದು ಯಾವಾಗ ಎಂಬೆಲ್ಲ ಮಾಹಿತಿ ಒದಗಿಸುವವರೂ, ಯಾವುದಾದರೂ ಕೆಲಸ ಖಾಲಿ ಇದ್ದರೆ ತಿಳಿಸುವ, ವಾರಾಂತ್ಯಕ್ಕೆ ಕಾರ್ ಬೂಟ್ ಸೇಲ್, ಚಾರಿಟಿ ಕುಕಿ ಸೇಲ್ ಮಣ್ಣು ಮಸಿ ಎಂದೆಲ್ಲಾ ಹಲವು ಹತ್ತು ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ನೆರೆಹೊರೆಯವರು ಮಾಹಿತಿ ತಿಳಿಸಲು ಮೊದಲೆಲ್ಲ ಪೇಪರ್‌ನಲ್ಲಿ ಬರೆದೋ, ಪ್ರಿಂಟ್ ಹಾಕಿಯೋ ಅಲ್ಲಲ್ಲಿ ದಾರಿಯುದ್ದಕ್ಕೂ ಮರಗಳ ಮೇಲೋ, ಕಂಬಗಳ ಮೇಲೋ ಅಂಟಿಸಿ ಹೋಗುತ್ತಿದ್ದರು. ಅದು ಜೋರಾಗಿ ಸುರಿವ ಇಲ್ಲಿನ ಕಾಲಾತೀತ ಮಳೆಗೆ ಕೊಚ್ಚಿಕೊಂಡು ಹೋಗದಿದ್ದರೆ ಮಾತ್ರ ಸಂದೇಶ ರವಾನೆ. ಇಲ್ಲದಿದ್ದರೆ ಮರುದಿನ ಕಸದ ಬುಟ್ಟಿಯಲ್ಲಿರುತ್ತಿತ್ತು. ಅಳಿದುಳಿದ ಪೇಪರ್ ಚೂರುಗಳು ಬೀದಿಯ ಅಂದವನ್ನೂ ಹಾಳು ಮಾಡುತ್ತಿದ್ದವು. ಈಗ್ ಎಫ್ ಬಿ ವಾಲ್‌ನಲ್ಲಿ ಇವೆಲ್ಲಾ ರಗಳೆಗಳೇ ಇಲ್ಲ. ಪೇಪರ್ ಬಳಸದೆ ಪರಿಸರ ಉಳಿಸಿ ಎಂಬ ಸ್ಲೋಗನ್ನಿಗೂ ಮರ್ಯಾದೆ. ಒಟ್ಟಿನಲ್ಲಿ ಒಂದೇ ಏಟಿಗೆ ಎರಡು ಕಲ್ಲು ಉದುರಿಸಿದೆ ಈ ವ್ಯವಸ್ಥೆ.

ಇದೆಲ್ಲದಕ್ಕಿಂತ ಮಹತ್ವವಾದ ಕೆಲಸ ಮಾಡುತ್ತಿರುವುದು ಈ ಗ್ರೂಪಿನ ಎಲ್ಲರನ್ನೂ ಇಲ್ಲಿ